ದಿನಾಂಕಃ 04.03.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಕೆ.ಎ.ಎಂ. ವಕೀಲರಿಂದಃ**

ವಾದಿ ನನ್ನ ಅಜ್ಜಿ. ಅವರಿಗೆ ಈಗ 75 ವರ್ಷ ಆಗಿರಬಹುದು. ಅವರು ನನಗೆ ಕೊಟ್ಟಿರುವ ಅಧಿಕಾರ ಪತ್ರದ ದಿನಾಂಕ ನನಗೆ ನೆನಪಿಲ್ಲ. ಇದೇ ಪ್ರಕರಣಕ್ಕೆ ಅಧಿಕಾರ ಪತ್ರ ಬರೆದುಕೊಟ್ಟಿರುವುದಾಗಿ ನಿಪಿ-1 ರಲ್ಲಿ ನಿರ್ದಿಷ್ಟವಾಗಿ ಬರೆಯಲಾಗಿದೆ. ದಾವಾ ಮತ್ತು ದಾವಾ ಸ್ವತ್ತಿನ ಬಗ್ಗೆ ನನಗೆ ಮಾಹಿತಿ ಇಲ್ಲದಿದ್ದರೂ ಸಹಾ ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು 2019 ನೇ ಇಸವಿಯಲ್ಲಿ ಸಲ್ಲಿಸಲಾಗಿದೆ. 1 ನೇ ಪ್ರತಿವಾದಿಯ ತಂದೆಯ ಹೆಸರು ನೆನಪಿಲ್ಲ. 1 ನೇಪ್ರತಿವಾದಿಯ ತಂದೆ ಎಲ್ಲಿ ವಾಸವಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಾವ ಸ್ವತ್ತಿನ ಸಂಖ್ಯೆ 434. ಈ ದಾವೆಯನ್ನು 3 ಎಕರೆ 25 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಸಲ್ಲಿಸಲಾಗಿದೆ. ಸಾಗುವಳಿ ಚೀಟಿ ವಿತರಣಾ ರಿಜಿಸ್ಟರ್ ನ ದೃಢೀಕೃತ ನಕಲನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ದಾವಾ ಜಮೀನು 2002 ರಲ್ಲಿ ಮಂಜೂರಾಗಿದೆ. ದಾವಾ ಜಮೀನಿನಲ್ಲಿ ವಾದಿ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವ ಜಮೀನಿನಲ್ಲಿ 1 ನೇ ಪ್ರತಿವಾದಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ವಾದಿ ದಾವಾ ಜಮೀನಿನಲ್ಲಿ ಸ್ವಾಧೀನ ಇಲ್ಲದಿದ್ದರೂ ಸಹಾ ಪ್ರಕರಣಕ್ಕೆ ಉಪಯೋಗವಾಗುಂವತೆ ಸ್ವಾಧೀನದಲ್ಲಿ ಇದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ತಿಳಿಸಿರುವಂತೆ ದಾವ ಜಮೀನಿನ ತೋಟದ ಕಂದಾಯವನ್ನು ಸಂಬಂಧಪಟ್ಟ ಕಚೇರಿಯಲ್ಲಿ ಪಾವತಿಸಲಾಗುತ್ತಿದೆ. ನಿರ್ದಿಷ್ಟವಾಗಿ ಯಾವ ಕಚೇರಿಯಲ್ಲಿ ಕಂದಾಯ ಪಾವತಿ ಮಾಡುಲಾಗುತ್ತಿದೆ ಎಂದು ಹೇಳಲಾಗುವುದಿಲ್ಲ ಎಂದರೆ ಸರಿ. ಎಷ್ಟು ವರ್ಷಕ್ಕೊಮ್ಮೆ ಎಷ್ಟು ಕಂದಾಯವನ್ನು ಪಾವತಿ ಮಾಡಲಾಗುತ್ತಿದೆ ಎಂದು ನನ್ನಿಂದ ಹೇಳಲಾಗುವುದಿಲ್ಲ. ಯಾವ ವರ್ಷದಿಂದ ಕಂದಾಯ ಪಾವತಿ ಮಾಡುಲಾಗುತ್ತಿದೆ ಎಂದು ನನ್ನಿಂದ ಹೇಳಲಾಗುವುದಿಲ್ಲ.

ದಾವಾ ಜಮೀನಿನಲ್ಲಿ ಯಾವುದೇ ವಿದವಾದ ಗಿಡಮರಗಳು ಹಾಗೂ ವಾಣಿಜ್ಯ ಫಸಲು ಇಲ್ಲ ಎಂದರೆ ಸರಿಯಲ್ಲ. ದಾವಾ ಜಮೀನಿನಲ್ದಿ ಕಾಫೀ ಮತ್ತು ಮೆಣಸು ಬೆಳೆಯಲಾಗುತ್ತದೆ. ಈ ಸಂಬಂಧ ಬೆಳೆ ದೃಢೀಕರಣ ಪತ್ರ ಹಾಜರುಪಡಸಲಾಗಿದೆ. ನಾನು ಹೇಳಿದಂತೆ ಯಾವುದೇ ಬೆಳೆ ದೃಢೀಕರಣ ಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಕಾಫೀ CRC ಪತ್ರ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ-1 ರಿಂದ 4 ರ ದಾಖಲಾತಿಗಳನ್ನು ತೋರಿಸಿ ಅದರ ಪೈಕಿ ಬೆಳೆ ದೃಢೀಕರಣ ಪತ್ರ ಮತ್ತು ಕಾಫೀ CRC ಪತ್ರ ಇಲ್ಲ ಎಂದರೆ ಸಾಕ್ಷಿ ತಮ್ಮ ವಕೀಲರು ಸಲ್ಲಿಸುತ್ತಾರೆ ಎಂದು ನುಡಿಯುತ್ತಾರೆ.

ದಾವಾ ಜಮೀನಿನಲ್ಲಿ ಎಷ್ಟು ವಿಸ್ತೀರ್ಣಕ್ಕೆ ಕಾಫೀ ಗಿಡಗಳನ್ನು ಹಾಕಲಾಗಿದೆ ಎಂದು ನನ್ನಿಂದ ಹೇಳಲಾಗುವುದಿಲ್ಲ. ಅದೇರೀತಿ ಎಷ್ಟು ಮೆಣಸಿನ ಬಳ್ಳಿಗಳು ಎಷ್ಟು ವಿಸ್ತೀರ್ಣದಲ್ಲಿ ಇದೆ ಎಂದು ಹೇಳಲು ಆಗುವುದಿಲ್ಲ. ಮೆಣಸು ಬಳ್ಳಿಗನ್ನು ಕಾಡು ಮರಗಳಿಗೆ ಹಬ್ಬಿಸಿ ಬಿಡಲಾಗಿದೆ. ದಾವಾ ಜಮೀನಿನಲ್ಲಿ ಎಷ್ಟು ಕಾಡುಮರಗಳು ಇವೆ ಎಂದು ನನಗೆ ಗೊತ್ತಿಲ್ಲ.

ದಾವ ಜಮೀನಿನ ಸುತ್ತ ಕಲ್ಲುಕಂಬ ಮತ್ತು ಮರದ ಕಂಬಗಳನ್ನು ಹಾಕಿ ಬೇಲಿ ನಿರ್ಮಿಸಲಾಗಿದೆ. ಎಷ್ಟು ಕಲ್ಲುಕಂಬ ಮತ್ತು ಎಷ್ಟು ಮರದ ಕಂಬ ಹಾಕಲಾಗಿದೆ ಎಂದು ನಿರ್ದಿಷ್ಟವಾಗಿ ನನ್ನಿಂದ ಹೇಳಲಾಗವುದಿಲ್ಲ. ವಾದ ಪತ್ರದಲ್ಲಿ ಹೇಳಿರುವಂತೆ ನಿರ್ದಿಷ್ಟವಾಗಿ ಯಾವ ದಿನದಂದು ಪ್ರತಿವಾದಿಗಳು ದಾವಾಜಮೀನಿನ ಬೇಲಿ ಕಿತ್ತು ತೊಂದರೆ ಕೊಟ್ಟಿದ್ದಾರೆ ಎಂದು ಹೇಳಲು ಆಗುವುದಿಲ್ಲ. ಆ ದಿನ ದಾವಾ ಜಮೀನಿನ ಬಳಿ ಯಾರು ಯಾರು ಬಂದಿದ್ದರು ಎಂದು ನಿರ್ದಿಷ್ಟವಾಗಿ ನನ್ನಿಂದ ಹೇಳಲಾಗುವುದಿಲ್ಲ ಎಂದರೆ ಸರಿ. ವಾದಪತ್ರದಲ್ಲಿ ಹೇಳಿರುವಂತೆ ಪ್ರತಿವಾದಿಗಳು ತೊಂದರೆ ಕೊಡಲು ಪ್ರಯತ್ನ ಪಟ್ಟ ಸಮಯಕ್ಕೆ ಫೋಟೋ ತೆಗೆದು ಹಾಜುರುಪಡಿಸಿಲ್ಲ ಎಂದರೆ ಸರಿ. ಪ್ರತಿವಾದಿಗಳ ವಿರುದ್ಧ ಕಳಸ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿರುವ ಬಗ್ಗೆ ಹಿಂಬರವನ್ನು ಹಾಜರುಪಡಿಸಲಾಗಿದೆ.

ದಾವಾ ಜಮೀನಿನ ದಕ್ಷಿಣ ದಿಕ್ಕಿಗೆ ಏನು ಇದೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಗಳು ದಾವಾ ಜಮೀನಿನಲ್ಲಿ ಅತೀಹೆಚ್ಚು ಆದಾಯ ಬರುವಂತೆ ಬೆಳೆ ಬೆಳೆಸಿರುವುದರಿಂದ ಅವರಿಗೆ ತೊಂದರೆ ನೀಡುವ ದುರುದ್ದೇಶದಿಂದ ಸುಳ್ಳು ದಾವೆ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ನಿಪಿ-1 ರಿಂದ 4 ರ ದಾಖಲೆಗಳನು ಸೃಷ್ಟಿಸಿಕೊಂಡು ಪ್ರಕರಣದಲ್ಲಿ ಲಾಭ ಪಡೆಯುವ ಉದ್ದೇಶದಿಂದ ಹಾಜರುಪಡಿಸಲಾಗಿದೆ ಎಂದರೆ ಸರಿಯಲ್ಲ. ದಾವಾದಲ್ಲಿ ಕೇಳಿರುವ ಪರಿಹಾರ ನಮಗೆ ಸಿಗದಿದ್ದರೆ ಏನು ತೊಂದರೆ ಇಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ಯಾವ ವಿಚಾರಕ್ಕೆ ಸಲ್ಲಿಸಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾವ ಜಮೀನಿನ ಪಶ್ಚಿಮ ದಿಕ್ಕಿಗೆ ಭದ್ರ ನದಿ ಇದೆ.

<u>ಮುಂದುವರೆದ ಪಾಟೀ ಸಾವಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

Sd/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.